# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103.

ದಿನಾಂಕ: 15.06.2024 ರಂದು ಬೆಳಿಗ್ಗೆ: 10.45 ಗಂಟೆಗೆ ವಿಶ್ವವಿದ್ಯಾನಿಲಯದ ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು–572103 ಇಲ್ಲಿ ನಡೆದ 2023–24ನೇ ಸಾಲಿನ ಐದನೇ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು

## ಹಾಜರಾದ ಸದಸ್ಯರುಗಳು

| | | |
|---|---|---|
| 1. | ಪ್ರೊ. ವೆಂಕಟೇಶ್ವರಲು ಎಂ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಲತಾ ಬಿ.ಎಸ್<br>ಹಿರಿಯ ಡೀನರು, ಶಿಕ್ಷಣ ನಿಕಾಯ, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | ಸದಸ್ಯರು |
| 3. | ಡಾ. ಕೆ. ರಾಜೀವಲೋಚನ<br>ನಿವೃತ್ತ ತತ್ವಶಾಸ್ತ್ರ ಉಪನ್ಯಾಸಕರು, ಕೌಸ್ತುಭ 179, ದಾರುಕ ಬಡಾವಣೆ, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ–577501. | ಸದಸ್ಯರು |
| 4. | ಶ್ರೀ ಕೆ.ಆರ್. ದೇವರಾಜ್<br>S/o ರಾಮಾಂಜಿನಪ್ಪ, ಮನೆ ಸಂಖ್ಯೆ: 202, ಹಳೆ ಅಂಚೆ ಕಚೇರಿ ರಸ್ತೆ, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562129 | ಸದಸ್ಯರು |
| 5. | ಶ್ರೀ ಕುಮಾರಸ್ವಾಮಿ ಹೆಚ್.ಬಿ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ– 572201 | ಸದಸ್ಯರು |
| 6. | ಪ್ರೊ. ರೇವಣಸಿದ್ದೇಶ್ವರ ಡಿ.ಆರ್<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ, ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ–572112 | ಸದಸ್ಯರು |
| 7. | ಡಾ. ಚಿತ್ತರಂಜನ್ ರೈ<br>ಪ್ರಾಂಶುಪಾಲರು, ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು | ಸದಸ್ಯರು |
| 8. | ಡಾ. ಜಾಯ್ ನೆರೆಲ್ಲಾ<br>ಪ್ರಾಂಶುಪಾಲರು, ಯೂನಿಯನ್ ಕ್ರಿಶ್ಚಿಯನ್ ಕಾಲೇಜು, ಶಿರಾ ಗೇಟ್, ತುಮಕೂರು | ಸದಸ್ಯರು |
| 9. | ಡಾ. ಕೊಟ್ರೇಶ್ ಎಂ.<br>ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 10. | ಪ್ರೊ. ಪ್ರಸನ್ನಕುಮಾರ್ ಕೆ.<br>ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 11. | ಶ್ರೀಮತಿ ನಹೀದ ಝಮ್ ಝಮ್ ಕೆ.ಎ.ಎಸ್.,<br>ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯ ಕಾರ್ಯದರ್ಶಿ |

## ಹಾಜರಾಗದ ಸದಸ್ಯರು

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರು ಅಥವಾ<br>ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರು ದಿನಾಂಕ: 15.06.2024ರ ಶನಿವಾರ ಬೆಳಿಗ್ಗೆ: 10:45 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು-572103 ಇಲ್ಲಿ ನಡೆದ 2023-24ನೇ ಸಾಲಿನ ಐದನೇ ವಿಶೇಷ ಸಿಂಡಿಕೇಟ್ ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು, ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯ ಬಗ್ಗೆ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳಲಾಯಿತು.

| ಕ್ರ ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| | | ಶೈಕ್ಷಣಿಕ ವಿಭಾಗ | |
| 1 | 2023-24.ವಿ.ಸಿಂ-05 ಶೈ.ವಿ.-01 | 2024-25ನೇ ಶೈಕ್ಷಣಿಕ ಸಾಲಿನಲ್ಲಿ 03 ವರ್ಷದ ಸ್ನಾತಕ ಪದವಿಯ ಪ್ರೋಗ್ರಾಂನ ಅನುಷ್ಠಾನದ ಸಂಬಂಧದಲ್ಲಿ ಅಧಿಸೂಚನೆ ಹೊರಡಿಸಿರುವ ಕ್ರಮದ ಸ್ಥಿರೀಕರಣದ ಕುರಿತು. | 2024-25ನೇ ಶೈಕ್ಷಣಿಕ ಸಾಲಿನಿಂದ 03 ವರ್ಷದ ಸ್ನಾತಕ ಪದವಿಯ ಪ್ರೋಗ್ರಾಂನ ಅನುಷ್ಠಾನದ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್‌ಇ 2023, ಬೆಂಗಳೂರು, ದಿನಾಂಕ:08.05.2024ರ ಆದೇಶದನ್ವಯ ವಿಶ್ವವಿದ್ಯಾನಿಲಯದ ವಿವಿಧ ನಿಕಾಯದ ಡೀನರ ಸಮಿತಿಯು ದಿನಾಂಕ: 16.05.2024ರ ಸಭೆಯಲ್ಲಿ ನಿರ್ಣಯಿಸಿದಂತೆ, ದಿನಾಂಕ:05.06.2024 ರಂದು ವಿಶ್ವವಿದ್ಯಾನಿಲಯವು ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| 2 | 2023-24.ವಿ.ಸಿಂ-05 ಶೈ.ವಿ.-02 | ತುಮಕೂರು ವಿಶ್ವವಿದ್ಯಾನಿಲಯದ 2024-25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಕೋರ್ಸ್‌ಗಳ ಪ್ರವೇಶ ಶುಲ್ಕಗಳನ್ನು ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ 2024-25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಪ್ರವೇಶ ಶುಲ್ಕಗಳನ್ನು ನಿಗದಿಪಡಿಸುವ ಸಂಬಂಧ ವಿಶ್ವವಿದ್ಯಾನಿಲಯದ ಘಟಕ ಹಾಗೂ ಸಂಯೋಜಿತ ಕಾಲೇಜುಗಳಿಗೆ ದಿನಾಂಕ:09.05.2024 ಮತ್ತು ದಿನಾಂಕ:31.05.2024 ರಂದು 2024-25ನೇ ಶೈಕ್ಷಣಿಕ ಸಾಲಿನ ಪ್ರವೇಶ ಶುಲ್ಕವನ್ನು ಅಧಿಸೂಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| 3 | 2023-24.ವಿ.ಸಿಂ-05 ಶೈ.ವಿ.-03 | ಸ್ನಾತಕೋತ್ತರ ಎಂ.ಬಿ.ಎ. ಅಧ್ಯಯನ ವಿಭಾಗಕ್ಕೆ ವಿಭಾಗೀಯ ಪರಿಷತ್ (Department Council) ರಚಿಸಿ ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | ಸ್ನಾತಕೋತ್ತರ ಎಂ.ಬಿ.ಎ. ಅಧ್ಯಯನ ವಿಭಾಗಕ್ಕೆ ದಿನಾಂಕ: 02.02.2024 ರಂದು ವಿಭಾಗೀಯ ಪರಿಷತ್ (Department Council) ರಚಿಸಿ ಅಧಿಸೂಚಿಸಲಾಗಿತ್ತು, ವಿಭಾಗೀಯ ಪರಿಷತ್‌ನ ಸದಸ್ಯರಾದ ಡಾ. ಶಿವಶಂಕರ್ ಕೆ.ಸಿ. ಇವರು ವಯೋನಿವೃತ್ತಿಯಾದ ಹಿನ್ನಲೆಯಲ್ಲಿ ದಿನಾಂಕ:20.05.2024ರಂದು ಸದರಿ ವಿಭಾಗದ ವಿಭಾಗೀಯ ಪರಿಷತ್ತನ್ನು |

| | | | |
|---|---|---|---|
| | | | ಪರಿಷ್ಕರಿಸಿ ಅಧಿಸೂಚಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| 4 | 2023-24.ವಿ.ಸಿಂ-05 ಶೈ.ವಿ.-04 | ಸ್ನಾತಕೋತ್ತರ L.L.M. ಮತ್ತು ಕನ್ನಡ ವಿಷಯಗಳ ಪಠ್ಯಕ್ರಮಗಳನ್ನು ಸಲ್ಲಿಸಿರುವ ಕುರಿತು. | ಸ್ನಾತಕೋತ್ತರ L.L.M. ಮತ್ತು ಕನ್ನಡ ವಿಷಯಗಳ ಪಠ್ಯಕ್ರಮಗಳು ಮತ್ತು (70:30 (SEE:IA) ಮಾದರಿಯಲ್ಲಿ ಪ್ರಶ್ನೆಪತ್ರಿಕೆ ಮಾದರಿಗಳನ್ನು ಅನುಮೋದಿಸುವ ಕುರಿತು ಚರ್ಚಿಸಿದ ಸಭೆಯು ಸದರಿ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು ಸಲ್ಲಿಸಿರುವ ಪಠ್ಯಕ್ರಮಗಳು ಮತ್ತು (70:30 (SEE:IA) ಮಾದರಿಯಲ್ಲಿ ಪ್ರಶ್ನೆಪತ್ರಿಕೆಗಳ ಮಾದರಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು L.L.M. ಸ್ನಾತಕೋತ್ತರ ಪದವಿಯನ್ನು 2023-24ನೇ ಶೈಕ್ಷಣಿಕ ಸಾಲಿನಿಂದ ಹಾಗೂ ಕನ್ನಡ ಸ್ನಾತಕೋತ್ತರ ಪದವಿಯನ್ನು 2024-25ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳಲು ವಿದ್ಯಾವಿಷಯಕ ಪರಿಷತ್ ಸಭೆಯು ಮಾಡಿರುವ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಕಾಲೇಜು ಅಭಿವೃದ್ಧಿ ಪರಿಷತ್** | | | |
| 5 | 2023-24.ವಿ.ಸಿಂ-05 ಕಾ.ಅ.ಪ.-01 | 2023-24ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿ UUCMS ತಂತ್ರಾಂಶದ ಮುಖಾಂತರ ಸಲ್ಲಿಸಿರುವ ವರದಿ ಮತ್ತು ಪುನರ್ ಪರಿಶೀಲನಾ ಸಮಿತಿ ವರದಿಗಳ ಅನುಮೋದನೆ ಕುರಿತು. | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳ ಸಂಯೋಜನೆ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿರುವ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿರುವ ಸದರಿ ಸಮಿತಿಯ ವರದಿಗಳನ್ನು ಅನುಮೋದಿಸಿರುವ ಹಾಗೂ ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿರುವ ಕಾಲೇಜುಗಳಿಗೆ ಸದರಿ ಸಮಿತಿಗಳು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಮುಂದುವರಿಕೆಯನ್ನು ಮಂಜೂರು ಮಾಡಬಹುದೆಂದು ಹಾಗೂ ಸಾರಂಗ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ತುಮಕೂರು ಈ ಕಾಲೇಜಿಗೆ 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿರುವುದಿಲ್ಲವೆಂಬ ಸ್ಥಳೀಯ |

| | | | |
|---|---|---|---|
| | | | ವಿಚಾರಣಾ ಸಮಿತಿ ವರದಿಯನ್ನು ಅನುಮೋದಿಸಿರುವ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

## ನಿರ್ಣಯಗಳು

**ಸ್ನಾತಕ ಪದವಿ ಪ್ರವೇಶಮಿತಿ ಹೆಚ್ಚಳ:**

1. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು **(Observations)** ಪಾಲಿಸುವ ಷರತ್ತಿಗೊಳಪಟ್ಟು 2024-25ನೇ ಶೈಕ್ಷಣಿಕ ಸಾಲಿಗೆ B.C.A-20 ಸೀಟುಗಳಿಗೆ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

2. ಶ್ರೀ ಸಿದ್ದಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು **(Observations)** ಪಾಲಿಸುವ ಷರತ್ತಿಗೊಳಪಟ್ಟು 2024-25ನೇ ಶೈಕ್ಷಣಿಕ ಸಾಲಿಗೆ B.C.A-20 ಸೀಟುಗಳಿಗೆ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

3. ಶ್ರೀ ಸಿದ್ದಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು **(Observations)** ಪಾಲಿಸುವ ಷರತ್ತಿಗೊಳಪಟ್ಟು 2024-25ನೇ ಶೈಕ್ಷಣಿಕ ಸಾಲಿಗೆ BBA-10, B.Com-20, B.C.A-30 ಸೀಟುಗಳಿಗೆ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

4. ಅನನ್ಯ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು **(Observations)** ಪಾಲಿಸುವ ಷರತ್ತಿಗೊಳಪಟ್ಟು 2024-25ನೇ ಶೈಕ್ಷಣಿಕ ಸಾಲಿಗೆ B.C.A-60 ಸೀಟುಗಳಿಗೆ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

5. ವಿದ್ಯಾ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು **(Observations)** ಪಾಲಿಸುವ ಷರತ್ತಿಗೊಳಪಟ್ಟು 2024-25ನೇ ಶೈಕ್ಷಣಿಕ ಸಾಲಿಗೆ B.C.A-30 ಸೀಟುಗಳಿಗೆ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

6. ಸರ್ವೋದಯ ಇನ್ಸ್ಟಿಟ್ಯೂಟ್ ಆಫ್ ಗ್ರಾಜ್ಯುಯೇಟ್ ಸ್ಟಡೀಸ್, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು **(Observations)** ಪಾಲಿಸುವ ಷರತ್ತಿಗೊಳಪಟ್ಟು 2024-25ನೇ ಶೈಕ್ಷಣಿಕ ಸಾಲಿಗೆ B.C.A-10 ಸೀಟುಗಳಿಗೆ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

7. ಶ್ರೀ ಸಿಗಂಧೂರೇಶ್ವರಿ ಪದವಿ ಕಾಲೇಜು, ಬೆಳ್ಳಾವಿ, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು **(Observations)** ಪಾಲಿಸುವ ಷರತ್ತಿಗೊಳಪಟ್ಟು 2024-25ನೇ ಶೈಕ್ಷಣಿಕ ಸಾಲಿಗೆ B.Sc-Fire and Industrial Safety -20

ಸೀಟುಗಳಿಗೆ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**ಸ್ನಾತಕೋತ್ತರ ಪ್ರವೇಶಮಿತಿ ಹೆಚ್ಚಳ:**

1. ಶೇಷಾದ್ರಿಪುರಂ ಪದವಿ ಕಾಲೇಜು, ತುಮಕೂರು ಈ ಕಾಲೇಜಿನ ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು **(Observations)** ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿಗೆ MBA-60 MCA-60 ಸೀಟುಗಳಿಗೆ ಪ್ರವೇಶ ಮಿತಿ ಹೆಚ್ಚಳದ ಸಂಯೋಜನೆಯನ್ನು ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**ಹೊಸ ಕೋರ್ಸ್:**

1. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.A-HEG-75, B.Com-(BFSI)-60, ಕೋರ್ಸುಗಳ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.A-HEEng -100, B.Com-(BFSI)-60, BSW-50 ಕೋರ್ಸುಗಳ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
3. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ M.Com-30 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
4. ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ BCA-30 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
5. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.A-HPS-60 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
6. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ BCA-60 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

7. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವೇಕೆರೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.Sc-PMCs-50, BSW-30, BCA-60 ಕೋರ್ಸುಗಳ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

8. ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.A-KSP-40 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

9. ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.B.A-40 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

10. ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.Sc-Data Science -60 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

11. ಎಸ್.ವಿ.ಎಸ್ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ BCA-40 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

12. ಸಿ.ಐ.ಟಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ MCA-60 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

13. ಶಾಂತಿ ಎಸ್.ಎಸ್.ಕೆ ಪ್ರಥಮ ದರ್ಜೆ ಕಾಲೇಜು, ಪಾವಗಡ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ BCA-60 ಕೋರ್ಸಿನ ಮುಂದೆ ನಿಗದಿಪಡಿಸಿರುವ ಪ್ರವೇಶಮಿತಿಯೊಂದಿಗೆ ಸಂಯೋಜನೆಯ ವಿಸ್ತರಣೆಯನ್ನು (ಹೊಸ ಕೋರ್ಸು) ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**ಹೊಸ ಕಾಲೇಜು:**

1. ಶ್ರೀ ಗುರು ರಾಘವೇಂದ್ರ ಎಜುಕೇಷನಲ್ ಟ್ರಸ್ಟ್, ತುಮಕೂರು ಇವರು ತಮ್ಮ ಟ್ರಸ್ಟ್ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಕ್ಯಾಂಬ್ರಿಡ್ಜ್ ಇನ್ಸ್ಟಿಟ್ಯೂಟ್ ಫಾರ್ ಪ್ರೊಫೆಷನಲ್ ಸ್ಟಡೀಸ್, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯ ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.Sc-PCM-

60, B.Com-80 ಕೋರ್ಸುಗಳ ಮುಂದೆ ನಮೂದಿಸಿರುವ ಪ್ರವೇಶಮಿತಿಯೊಂದಿಗೆ ಹೊಸ ಕಾಲೇಜು ಸಂಯೋಜನೆ ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

2. ವಿದ್ಯಾವಾಹಿನಿ ಶಿಕ್ಷಣ ಸಂಸ್ಥೆ, ತುಮಕೂರು ಇವರು ತಮ್ಮ ಟ್ರಸ್ಟ್ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ವೈಸಿರಿ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯ ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.CA-180, BBA-60 ಕೋರ್ಸುಗಳ ಮುಂದೆ ನಮೂದಿಸಿರುವ ಪ್ರವೇಶಮಿತಿಯೊಂದಿಗೆ ಹೊಸ ಕಾಲೇಜು ಸಂಯೋಜನೆ ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

3. ಎಂ.ಎರ್ ಎಜುಕೇಷನ್ ಟ್ರಸ್ಟ್, ತುಮಕೂರು ಇವರು ತಮ್ಮ ಟ್ರಸ್ಟ್ ವತಿಯಿಂದ ಪ್ರಾರಂಭಿಸಲು ಉದ್ದೇಶಿಸಿರುವ ಆಯುಷ್ಮಾನ್ ಪ್ರಥಮ ದರ್ಜೆ ಕಾಲೇಜು, ಬೆಳಧಾರ, ಕೋರ ಹೋಬಳಿ, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯ ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.Com-60 ಕೋರ್ಸುಗಳ ಮುಂದೆ ನಮೂದಿಸಿರುವ ಪ್ರವೇಶಮಿತಿಯೊಂದಿಗೆ ಹೊಸ ಕಾಲೇಜು ಸಂಯೋಜನೆ ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**ಶಾಶ್ವತ ಸಂಯೋಜನೆ:**

1. ಶೇಷಾದ್ರಿಪುರಂ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.Com-200, BCA- 240, BBA-40 ಕೋರ್ಸುಗಳಿಗೆ ಶಾಶ್ವತ ಸಂಯೋಜನೆ ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ BA-HEP-300, HES-200, HEK-200, EngSP-200, HEE-100, B.Sc- PMCs-100, PCM-300, CBZ-200, PME-100, PMG-100, B.Com-800, BBA-100, BCA-150 ಕೋರ್ಸುಗಳಿಗೆ ಶಾಶ್ವತ ಸಂಯೋಜನೆ ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**ಶಾಶ್ವತ ಸಂಯೋಜನೆ ನವೀಕರಣ:**

1. ಸರ್ಕಾರಿ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಶಿರಾ, ತುಮಕೂರು ಜಿಲ್ಲೆ ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಕಾಲೇಜು ನಿಗದಿತ ಅಂಕ ಶೇಕಡ 70% ಹೊಂದದೇ ಶೇಕಡ 67.17% ಅಂಕ ಪಡೆದ ಕಾರಣ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿಗೆ B.A-HEP-180, KSP-100, HES-200, B.Sc-PCM-100,CBZ-100, B.Com-600, BBA-100 ಕೋರ್ಸುಗಳಿಗೆ 'ಶಾಶ್ವತ ಸಂಯೋಜನೆ ನವೀಕರಣ'ದ ಬದಲಿಗೆ 'ಸಂಯೋಜನೆ ನವೀಕರಣ'ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
2. ಶ್ರೀ ಸಿದ್ಧಾರ್ಥ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಮಿತಿಯು ಗಮನಿಸಿರುವ ಅಂಶಗಳನ್ನು (Observations) ಪಾಲಿಸುವ ಷರತ್ತಿಗೊಳಪಟ್ಟು 2024–25ನೇ ಶೈಕ್ಷಣಿಕ ಸಾಲಿನಿಂದ B.A- HEP-100, PsySRd-100, JrPsyK-100, HEK-60. B.Sc-PME-60, PMCs-45, PCM-45, CZMb-30, CBS-45, CZS-45, CBZ-60, B.Com-100, ಕೋರ್ಸುಗಳಿಗೆ ಶಾಶ್ವತ ಸಂಯೋಜನೆ ನವೀಕರಣ ಮಂಜೂರು ಮಾಡಬಹುದೆಂಬ ವಿದ್ಯಾವಿಷಯಕ ಪರಿಷತ್ತು ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**Extension of Existing Permanent Affiliation:**

1. ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳು ಶಾಶ್ವತ ಸಂಯೋಜನೆ ಮಾನ್ಯತೆಯು ಚಾಲ್ತಿಯಲ್ಲಿದ್ದ ಕಾಲೇಜುಗಳ Extension of Existing Permanent Affiliation ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿರುವ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಿರುವ ವಿದ್ಯಾವಿಷಯಕ ಪರಿಷತ್ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**ವ್ಯಾಸಂಗ ಕ್ರಮದ ಸ್ವಯಂ ಮುಚ್ಚುವಿಕೆ:**

1. ಹೇಮಾದ್ರಿ ಪ್ರಥಮ ದರ್ಜೆ ಕಾಲೇಜು, ತುಮಕೂರು ಈ ಕಾಲೇಜಿನವರು 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಸ್ತಾವನೆಯಲ್ಲಿ B.S.W ಪದವಿ ವ್ಯಾಸಂಗ ಕ್ರಮವನ್ನು ಮುಚ್ಚುವ ಸಂಬಂಧ ಸಲ್ಲಿಸಿರುವ ಮನವಿಯ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯಲ್ಲಿ ವ್ಯಾಸಂಗ ಕ್ರಮದ ಮುಚ್ಚುವಿಕೆಗೆ ಶಿಫಾರಸ್ಸು ಮಾಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅಂಗೀಕರಿಸಿ, ಸದರಿ ಕಾಲೇಜಿನವರು ಕೋರಿರುವ B.S.W ಕೋರ್ಸಿನ ವ್ಯಾಸಂಗ ಕ್ರಮವನ್ನು 2024-25ನೇ ಶೈಕ್ಷಣಿಕ ಸಾಲಿನಿಂದ ಮುಚ್ಚಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 65ರ ಉಪಪ್ರಕರಣ (3)ರನುಸಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
2. ಸಿ.ಐ.ಟಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ ಈ ಕಾಲೇಜಿನವರು 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಸ್ತಾವನೆಯಲ್ಲಿ B.B.A ಪದವಿ ವ್ಯಾಸಂಗ ಕ್ರಮವನ್ನು ಮುಚ್ಚುವ ಸಂಬಂಧ ಸಲ್ಲಿಸಿರುವ ಮನವಿಯ ಕುರಿತು ಸ್ಥಳೀಯ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯಲ್ಲಿ ವ್ಯಾಸಂಗ ಕ್ರಮದ ಮುಚ್ಚುವಿಕೆಗೆ ಶಿಫಾರಸ್ಸು ಮಾಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅಂಗೀಕರಿಸಿ, ಸದರಿ ಕಾಲೇಜಿನವರು ಕೋರಿರುವ BBA ಕೋರ್ಸಿನ ವ್ಯಾಸಂಗ ಕ್ರಮವನ್ನು 2024-25ನೇ ಶೈಕ್ಷಣಿಕ ಸಾಲಿನಿಂದ ಮುಚ್ಚಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 65ರ ಉಪಪ್ರಕರಣ (3)ರನುಸಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

| | | | |
|---|---|---|---|
| | | **ಇಂಜಿನಿಯರಿಂಗ್ ವಿಭಾಗ** | |
| 6 | 2023-24.ವಿ.ಸಿಂ-05<br>ಇಂ.ವಿ-01 | ತುಮಕೂರು ವಿಶ್ವವಿದ್ಯಾನಿಲಯದ ಶಿರಾ ಸ್ನಾತಕೋತ್ತರ ಕೇಂದ್ರದ ಆವರಣಕ್ಕೆ ಫೆನ್ಸಿಂಗ್ ಅಳವಡಿಸುವ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತದ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಶಿರಾ ಸ್ನಾತಕೋತ್ತರ ಕೇಂದ್ರದ ಆವರಣಕ್ಕೆ ಫೆನ್ಸಿಂಗ್ ಅಳವಡಿಸುವ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತದ ಕುರಿತು ಚರ್ಚಿಸಿದ ಸಭೆಯು, ಸದರಿ ಕಾಮಗಾರಿಗೆ ಒಟ್ಟು ಅಂದಾಜು ಮೊತ್ತ ರೂ.46.00 ಲಕ್ಷಗಳಿಗೆ ಮಂಜೂರಾಗಿದ್ದು, ಶ್ರೀ ಪಿ.ಆರ್ ನವೀನ್ ಕುಮಾರ್ L-1 ಗುತ್ತಿಗೆದಾರರಿಗೆ ರೂ.34,04,171.00 (ಮೂವತ್ನಾಲ್ಕು ಲಕ್ಷದ ನಾಲ್ಕು ಸಾವಿರದ ಒಂದುನೂರ ಎಪ್ಪತ್ತೊಂದು ರೂಪಾಯಿಗಳು ಮಾತ್ರ) ಗಳಿಗೆ ಕಾರ್ಯಾದೇಶವನ್ನು ನೀಡಿದ್ದು, ಇದರಲ್ಲಿ ರೂ. 12.00 ಲಕ್ಷಗಳು ಉಳಿತಾಯಗೊಂಡಿರುತ್ತವೆ.<br><br>ಹಾಗೂ ಸದರಿ ಕಾಮಗಾರಿಗೆ ಮೊದಲು ಮಂಜೂರಾದ ಸ್ಥಳದಲ್ಲಿ 10 ಎಕರೆ ಕಡಿತಗೊಳಿಸಿ, ತತ್ಸಮಾನವಾಗಿ ಪರ್ಯಾಯವಾಗಿ ಆಕಾರವಿಲ್ಲದ ಹೆಚ್ಚುವರಿ |

| | | | |
|---|---|---|---|
| | | | ಜಾಗವನ್ನು ಹಂಚಿಕೆ ಮಾಡಲು ಭರವಸೆ ನೀಡಿದ್ದು, ಇದರಿಂದ ಆ ಭಾಗಕ್ಕೆ ಫೆನ್ಸಿಂಗ್ ನಿರ್ವಹಿಸಲು ಸಾಧ್ಯವಿಲ್ಲದ ಪ್ರಯುಕ್ತ ಉಳಿಕೆ 15 ಎಕರೆಗೆ ಮಾತ್ರ ಫೆನ್ಸಿಂಗ್ ನಿರ್ವಹಿಸಿ ರೂ.26,84,262.00 (ಇಪ್ಪತ್ತಾರು ಲಕ್ಷದ ಎಂಬತ್ತಾಲ್ಕು ಸಾವಿರದ ಎರಡುನೂರ ಅರವತ್ತೆರಡು ರೂಪಾಯಿಗಳು ಮಾತ್ರ) ಗಳ ಬಿಲ್ಲನ್ನು ಪಾವತಿಸಲಾಗಿರುತ್ತದೆ. ಇದರಿಂದ ಗುತ್ತಿಗೆದಾರರು ನಮೂದಿಸಿರುವ ಮೊತ್ತದಲ್ಲಿಯೂ ಸಹ ಹಣ ಉಳಿತಾಯಗೊಂಡಿದ್ದು, ಸದರಿ ಉಳಿತಾಯ ಮೊತ್ತದಲ್ಲಿ ಈಗಾಗಲೇ 15 ಎಕರೆಗೆ ಫೆನ್ಸಿಂಗ್ ಮಾಡಲಾದ ಭಾಗಕ್ಕೆ ವಿವಿಧ ಜಾತಿಯ ಮರಗಳನ್ನು ಬೆಳೆಸಲು ಆವರಣದಲ್ಲಿನ ಜಂಗಲ್ ತೆಗೆದು ಭೂಮಿಯನ್ನು ಮಟ್ಟ ಮಾಡುವ ಸಂಬಂಧ ಸರಿಸುಮಾರು ರೂ.15.00 ಲಕ್ಷಗಳ ಮೊತ್ತ ಅವಶ್ಯಕತೆ ಇದ್ದು, ಈ ಮೊತ್ತವು ಮಂಜೂರಾದ ಅಂದಾಜು ಮೊತ್ತದೊಳಗೆ ಬರುವಂತೆ ಅವಶ್ಯಕ **Workslip & EIRL** ಅಂಶಗಳೊಂದಿಗೆ ಕಾಮಗಾರಿಯನ್ನು ನಿರ್ವಹಿಸಲು ಕಾಮಗಾರಿಯ ಪರಿಷ್ಕೃತ ಅಂದಾಜು **(Revised Estimate)** ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 7 | 2023-24.ವಿ.ಸಿಂ-05<br>ಇಂ.ವಿ-02 | ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರ 'ಕಲ್ಪಸಿರಿ'ಯಲ್ಲಿ ನಿರ್ಮಾಣವಾಗುತ್ತಿರುವ ಶೈಕ್ಷಣಿಕ ಭವನ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತದ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ತಿಪಟೂರು ಸ್ನಾತಕೋತ್ತರ ಕೇಂದ್ರ 'ಕಲ್ಪಸಿರಿ'ಯಲ್ಲಿ ನಿರ್ಮಾಣವಾಗುತ್ತಿರುವ ಶೈಕ್ಷಣಿಕ ಭವನ ಕಾಮಗಾರಿಯು ರೂ. 386.00 ಲಕ್ಷಗಳಿಗೆ ಮಂಜೂರಾಗಿದ್ದು, ಮೆ.ಅಪೂರ್ವ ಕನ್‌ಸ್ಟ್ರಕ್ಷನ್ಸ್, ತುಮಕೂರು ರವರು L-1 ಗುತ್ತಿಗೆದಾರರು ರೂ.343.51 ಲಕ್ಷಗಳಿಗೆ ಟೆಂಡರ್ ನಮೂದಿಸಿರುತ್ತಾರೆ. ಇದರಿಂದಾಗಿ ರೂ.42.49 ಲಕ್ಷಗಳು ಹಾಗೂ ಹಾಲಿ ಟೆಂಡರ್‌ನಲ್ಲಿರುವ ಕೆಲವು ಅಂಶಗಳಲ್ಲಿ ಪರಿಮಾಣ **(Quantity)** ಉಳಿತಾಯಗೊಳ್ಳಲಿದ್ದು, ಒಟ್ಟು ಉಳಿತಾಯ ಮೊತ್ತದಲ್ಲಿ ಮೊದಲನೇ ಮಹಡಿಯಲ್ಲಿ ಎರಡು ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಬಹುದಾಗಿದ್ದು, ಮಂಜೂರಾದ ಮೂಲ ಅಂದಾಜು ಮೊತ್ತದೊಳಗೆ ಬರುವಂತೆ ಅವಶ್ಯಕ **Workslip & EIRL** ಅಂಶಗಳನ್ನು ಒಳಗೊಂಡ ಪರಿಷ್ಕೃತ ಅಂದಾಜು **(Revised Estimate)** ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ |

| | | | |
|---|---|---|---|
| | | | ಅನುಮೋದಿಸಿತು. |
| 8 | 2023–24.ವಿ.ಸಿಂ–05 ಇಂ.ವಿ–03 | ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ಒಳಾಂಗಣ ಕ್ರೀಡಾಂಗಣ (Indoor Stadium) ನಿರ್ಮಾಣ ಕಾಮಗಾರಿಯ ಟೆಂಡರ್ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ಒಳಾಂಗಣ ಕ್ರೀಡಾಂಗಣ (Indoor Stadium) ನಿರ್ಮಾಣ ಮಾಡುವ ಕಾಮಗಾರಿಯ ಕುರಿತು ಚರ್ಚಿಸಿದ ಸಭೆಯು, ಈ ಕುರಿತು ದಿನಾಂಕ: 13.06.2024ರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಗೊಂಡು ದಿನಾಂಕ: 14.06.2024ರ ಆರ್ಥಿಕ ಬಿಡ್‌ನ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ರೂ.496.00 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಗೆ L-1 ಬಿಡ್‌ದಾರರಾದ ಶ್ರೀ ವೀರಸ್ವಾಮಿ ರೆಡ್ಡಿ ರಮೇಶ್ (ಮೆ. ವೀರಸ್ವಾಮಿ ರೆಡ್ಡಿ ಅಂಡ್ ಸನ್ಸ್) ಇವರು ನಮೂದಿಸಿರುವ ಟೆಂಡರ್ ಮೊತ್ತ ರೂ.4,61,66,999.68 (ನಾಲ್ಕು ಕೋಟಿ ಅರವತ್ತೊಂದು ಲಕ್ಷದ ಅರವತ್ತಾರು ಸಾವಿರದ ಒಂಭೈನೂರ ತೊಂಬತ್ತೊಂಬತ್ತು ರೂಪಾಯಿಗಳು ಮತ್ತು ಅರವತ್ತೆಂಟು ಪೈಸೆ ಮಾತ್ರ)ಗಳಿಗೆ ಕಾಮಗಾರಿ ಕಾರ್ಯಾದೇಶ ವನ್ನು ನೀಡಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| **ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ (ಸಿಬ್ಬಂದಿ ವಿಭಾಗ)** | | | |
| 9 | 2023–24.ವಿ.ಸಿಂ–05 ಸಿ.ವಿ–01 | ತುಮಕೂರು ವಿಶ್ವವಿದ್ಯಾನಿಲಯದ ಹೊರಗುತ್ತಿಗೆಯಡಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಸಂಚಿತ ವೇತನದಡಿ ಪರಿಗಣಿಸಿರುವ ಬಗ್ಗೆ. | ಸದರಿ ವಿಷಯದ ಕುರಿತಾಗಿ, ಶ್ರೀಮತಿ ಪದ್ಮಾವತಿ ಟಿ.ಎನ್, ಶ್ರೀ ನರಸಿಂಹಮೂರ್ತಿ ಎಂ.ಎನ್, ಶ್ರೀ ನರಸಿಂಹಮೂರ್ತಿ, ಶ್ರೀ ಗೋವಿಂದರಾಯ ಎನ್, ಶ್ರೀ ನಾಗರಾಜು ಆರ್. ಮತ್ತು ದಯಾನಂದಸ್ವಾಮಿ ಹೆಚ್.ಎಸ್, ಈ ಮೊದಲು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸಂಚಿತ ವೇತನದಡಿಯಲ್ಲಿ ಕಾರ್ಯನಿರ್ವಹಿಸಿ ತದನಂತರದಲ್ಲಿ ಹುದ್ದೆಯನ್ನು ತೊರೆದಿರುತ್ತಾರೆ. ನಂತರದ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಸೇವೆಗೆ ಹೊರಗುತ್ತಿಗೆಯಡಿಯಲ್ಲಿ ಸೇವೆಗೆ ಸೇರಿಕೊಂಡು, ಸಂಚಿತ ವೇತನದಡಿಯಲ್ಲಿ ಪರಿಗಣಿಸುವಂತೆ ಕೋರಿರುವುದನ್ನು ಹಾಗೂ ಸರ್ಕಾರದ ಪತ್ರ ಸಂಖ್ಯೆ: ಇಡಿ 3 ಯುಟಿಟಿ 2021, ಬೆಂಗಳೂರು, ದಿನಾಂಕ:15.04.2021ರ ಮಾಹಿತಿಯನ್ನು, ದಿನಾಂಕ:07.04.2021ರ ಸಿಂಡಿಕೇಟ್ ಮತ್ತು ದಿನಾಂಕ: 30.06.2021ರ ಸಿಂಡಿಕೇಟ್ ನಿರ್ಣಯವನ್ನು ಸಭೆಯ ಗಮನಕ್ಕೆ ತರಲಾಗಿ, ಸದರಿ ಸಭಾ ನಿರ್ಣಯದಂತೆ ಇವರುಗಳನ್ನು ಸಂಚಿತ ವೇತನದಡಿಯಲ್ಲಿ ಪರಿಗಣಿಸಿ ಸೇವೆಯಲ್ಲಿ ಮುಂದುವರೆಸಲಾಗಿರುತ್ತದೆ ಹಾಗೂ ಸದರಿಯವರುಗಳ ಕುರಿತು |

| | | | |
|---|---|---|---|
| | | | ಲೆಕ್ಕಪರಿಶೋಧನೆಯ ಆಕ್ಷೇಪಣೆ ಆಗಿರುವ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಿಂಡಿಕೇಟ್ ಸಭೆಗೆ ವಿವರಿಸಿದರು.<br>ಈ ಸಂಬಂಧ ಚರ್ಚಿಸಿದ ಸಭೆಯು, ಇನ್ನು ಮುಂದೆ ಈ ರೀತಿಯ ಪ್ರಕರಣಗಳಿಗೆ ಅವಕಾಶ ಮಾಡಿಕೊಡದಂತೆ ಕ್ರಮಕೈಗೊಳ್ಳಲು ಹಾಗೂ ಮೇಲ್ಕಂಡ 06 ನೌಕರರು ಬಡತನದ ಹಿನ್ನಲೆಯವರಾಗಿರುವುದರಿಂದ, ಮಾನವೀಯತೆ ದೃಷ್ಟಿಯಿಂದ ಇದೊಂದು ಬಾರಿಗೆ ಮಾತ್ರ ಅವಕಾಶ ಕಲ್ಪಿಸಿದ್ದು, ಸದರಿಯವರುಗಳನ್ನು ಸಂಚಿತ ವೇತನದಡಿಯಲ್ಲಿ ಸೇವೆಯಲ್ಲಿ ಮುಂದುವರೆಸಿರುವ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

1) ಸ್ನಾತಕೋತ್ತರ ವಿಭಾಗಗಳ ಪ್ರಾಧ್ಯಾಪಕರು ವಿಭಾಗಗಳ ಅಧ್ಯಕ್ಷರು/ ಸಂಯೋಜಕರುಗಳಾಗಿ ಕಾರ್ಯನಿರ್ವಹಿಸುತ್ತಿರುವ ಅವಧಿಯಲ್ಲಿ ಹಾಗೂ ವಿಶ್ವವಿದ್ಯಾನಿಲಯದ ಆಡಳಿತ ಕಚೇರಿಯಲ್ಲಿ ಉಪಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳ ಅವರ ಕಾರ್ಯನಿರ್ವಹಣಾಅವಧಿಗೆ ಮಾತ್ರವರ್ಷಕ್ಕೆ 10+20 ಗಳಿಕೆ ರಜೆಗಳನ್ನು ಸದರಿಯವರುಗಳಿಂದ ಯಾವುದೇ ಮನವಿಗಳನ್ನು (ಹಾಜರಾತಿ ವಿವರ) ಪಡೆಯದೆ ಸೇವಾ ಪುಸ್ತಕದಲ್ಲಿ ನಮೂದಿಸಲು ದಿನಾಂಕ 13.09.2023ರಂದು ನಡೆದ ವಿದ್ಯಾವಿಷಯಕ ಪರಿಷತ್ತು ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ದಿನಾಂಕ: 13.09.2023ರ ವಿದ್ಯಾವಿಷಯಕ ಪರಿಷತ್ತು ಸಭೆಯ ನಿರ್ಣಯವನ್ನು 2010 ರಿಂದ ಪೂರ್ವಾನ್ವಯವಾಗುವಂತೆ ಅಳವಡಿಸಿಕೊಳ್ಳಲು ಅನುಮೋದಿಸಿ ನಿರ್ಣಯಿಸಿತು.

2) ಡಾ. ಕೆ. ರಾಜೀವಲೋಚನಾ, ಸಿಂಡಿಕೇಟ್ ಸದಸ್ಯರು, ಇವರು ಶ್ರೀ ಎನ್.ವಿ ವೆಂಕಟೇಶ್, ಶ್ರೀ ಜಯಸಿಂಹ ಕೆ.ಬಿ ಮತ್ತು ಶ್ರೀ ನರಸಿಂಹಮೂರ್ತಿ ಸಿ., ಇವರುಗಳನ್ನು ಸಂಚಿತ ವೇತನದಡಿಯಲ್ಲಿ ಪರಿಗಣಿಸುವಂತೆ ಪತ್ರದ ಮೂಲಕ ವಿಷಯ ಮಂಡಿಸಿದರು. ಈ ಸಂಬಂಧ, ಸರ್ಕಾರದ ಪತ್ರ ಸಂಖ್ಯೆ: ಇಡಿ 3 ಯುಟಿಟಿ 2021, ಬೆಂಗಳೂರು, ದಿನಾಂಕ:15.04.2021ರ ಮಾಹಿತಿಯನ್ನು ಹಾಗೂ ದಿನಾಂಕ:17.04.2021ರ ಸಿಂಡಿಕೇಟ್ ಸಭೆ ಮತ್ತು ದಿನಾಂಕ: 30.06.2021ರ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ಈಗಾಗಲೇ ಇಂತಹ ಪ್ರಕರಣದ ಪೈಕಿ 06 ಜನ ನೌಕರರನ್ನು ಹೊರಗುತ್ತಿಗೆಯಿಂದ ಸಂಚಿತವೇತನಕ್ಕೆ ಪರಿಗಣಿಸಿದ್ದು, ಈ ಕುರಿತು ಪ್ರಸ್ತುತ ಲೆಕ್ಕ ಪರಿಶೋಧನೆಯ ಆಕ್ಷೇಪಣೆ ಆಗಿರುವ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಈಗಾಗಲೇ ಸದರಿ ಸಿಬ್ಬಂದಿಗಳು ಕಳೆದ 10–15 ವರ್ಷ ಮೇಲ್ಪಟ್ಟು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ. ಇದರೊಂದಿಗೆ ಈ ಹಿಂದೆ ಸಂಚಿತ ವೇತನದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕಾರಣಾಂತರಗಳಿಂದ ಈ ಕಾರ್ಯದಿಂದ ಸ್ವಲ್ಪ ಸಮಯ ದೂರವಿದ್ದು, ಪುನಃ ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಕಾರಣದಿಂದಾಗಿ, ಹಲವು ಬಾರಿ ವಿಶ್ವವಿದ್ಯಾನಿಲಯಕ್ಕೆ ಸಂಚಿತವೇತನದಡಿಯಲ್ಲಿ ಸೇರ್ಪಡೆ ಮಾಡಲು ಮನವಿ ಮಾಡಿದ್ದುದನ್ನು ವಿಶ್ವವಿದ್ಯಾನಿಲಯದ ಆಡಳಿತ ಸ್ಪಂದಿಸಿರುವುದಿಲ್ಲ. ಸದರಿಯವರ ಕುಟುಂಬದ ಆರ್ಥಿಕ ಪರಿಸ್ಥಿತಿ ಕಡು ಬಡತನ ಇರುವುದರಿಂದ ಇವರ ಮನವಿಯನ್ನು ಮಾನವೀಯತೆ ದೃಷ್ಟಿಯಿಂದ 03 ಜನ ನೌಕರರನ್ನು ಸಂಚಿತ ವೇತನ ಅಡಿಯಲ್ಲಿ ಪರಿಗಣಿಸಲು

ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಇನ್ನುಮುಂದೆ ಯಾರನ್ನು ಸಂಚಿತ ವೇತನದಡಿಯಲ್ಲಿ ಪರಿಗಣಿಸಲಾಗುವುದಿಲ್ಲವೆಂದು ಸರ್ಕಾರದ ಗಮನಕ್ಕೆ ತರಲು ನಿರ್ಣಯಿಸಲಾಯಿತು.

3) 2020–21ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಶುಲ್ಕದಿಂದ ವಿನಾಯಿತಿ ಪಡೆದು ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ನೇರವಾಗಿ ವಿದ್ಯಾರ್ಥಿ ವೇತನವು ಮಂಜೂರಾಗಿರುತ್ತದೆ. ಪ್ರಸ್ತುತ, ಸದರಿ ವಿದ್ಯಾರ್ಥಿಗಳು ಪದವಿಯನ್ನು ಮುಕ್ತಾಯಗೊಳಿಸಿರುತ್ತಾರೆ. ಅಂತಹ ವಿದ್ಯಾರ್ಥಿಗಳ ಕುರಿತಾಗಿ ಪರೀಕ್ಷಾ ಶುಲ್ಕವು ಬಾಕಿ ಇದ್ದು ವಿದ್ಯಾರ್ಥಿಗಳು ಲಭ್ಯವಾಗದ ಕಾರಣ ಕಾಲೇಜಿನ ವತಿಯಿಂದ ಪಾವತಿಯಾಗದೇ ಬಾಕಿ ಇರುವ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡುವಂತೆ ಸಿಂಡಿಕೇಟ್ ಸದಸ್ಯರುಗಳಾದ ಡಾ. ಚಿತ್ತರಂಜನ್ ರೈ ಮತ್ತು ಡಾ. ರೇವಣ ಸಿದ್ದೇಶ್ವರ ಇವರು ಸಭೆಯ ಗಮನಕ್ಕೆ ತಂದರು. ಈ ಕುರಿತು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ತಿಳಿಸಿದರು.

4) ಇನ್ನು ಮುಂದೆ ಇಂಜಿನಿಯರಿಂಗ್ ವಿಭಾಗದಿಂದ ಕಾಮಗಾರಿಯ ಪ್ರಾರಂಭದ ಸಂಬಂಧ ಮಂಡಿಸುವ ಕಾರ್ಯಸೂಚಿಗಳಿಗೆ PPT presentation slides ಮೂಲಕ ಸಭೆಯಲ್ಲಿ ಪ್ರಸ್ತುತಿಪಡಿಸುವಂತೆ ಡಾ. ಕೆ. ರಾಜೀವಲೋಚನ, ಸಿಂಡಿಕೇಟ್ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿದರು, ಈ ಸಂಬಂಧ ಮಾನ್ಯ ಕುಲಪತಿಗಳು ಸಭೆಯಲ್ಲಿ ಒಪ್ಪಿಗೆಯನ್ನು ಸೂಚಿಸಿದರು.

| | | | |
|---|---|---|---|
| ಕುಲಸಚಿವರು (ಪರೀಕ್ಷಾಂಗ) | [signature] | ಡಾ. ಕೊಟ್ರೇಶ್ ಎಂ. | [signature] |
| ಡಾ. ಕೆ ರಾಜೀವಲೋಚನ | | ಪ್ರೊ. ರೇವಣಸಿದ್ದೇಶ್ವರ ಡಿ.ಆರ್. | [signature] |
| ಶ್ರೀ ಕೆ.ಆರ್‌ದೇವರಾಜ್ | | ಡಾ. ಚಿತ್ತರಂಜನ್ ರೈ | |
| ಶ್ರೀ ಕುಮಾರಸ್ವಾಮಿ ಹೆಚ್.ಬಿ. | [signature] | ಡಾ. ಜಾಯ್ ನೆರೆಲ್ಲಾ | [signature] |
| ಶ್ರೀಮತಿ ಲತಾ ಬಿ.ಎಸ್. | [signature] | | |

ಮಾನ್ಯ ಕುಲಸಚಿವರು

ಮಾನ್ಯ ಕುಲಪತಿಗಳು